

ಪುರಿ ದೇವಸ್ಥಾನದ ವಿಗ್ರಹ
ಕಥೆ: ಪರಮಹಂಸದಾಸ
ಚಿತ್ರ: ಶಂಕರ್
ಕಳಿಂಗ ದೇಶದ ರಾಜ ಶ್ರೀಕ್ಷೇತ್ರ ಪುರಿಯಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಿದ. ಅದಕ್ಕೆ ವಿಗ್ರಹವನ್ನು ತಯಾರಿಸಬೇಕಾಗಿತ್ತು. ಅತಿ ಸುಂದರವಾದ ವಿಗ್ರಹವನ್ನು ತಯಾರಿಸಬೇಕೆಂದು ಅವನ ಆಸೆಯಾಗಿತ್ತು. ಅದಕ್ಕಾಗಿ ಡಂಗುರದ ಮೂಲಕ ಹೀಗೆ ಸಾರಿದ......
1
''ರಾಜಾಧಿರಾಜ ಕಳಿಂಗ ರಾಜನ ಆಜ್ಞೆಯನ್ನು ಕೇಳಿ, ಮಹಾರಾಜನಿಗೆ ತೃಪ್ತಿಯಾಗುವಂತಹ ಜಗನ್ನಾಥನ ವಿಗ್ರಹವನ್ನು ಕೆತ್ತುವ ಶಿಲ್ಪಿಗೆ ಹತ್ತುಸಾವಿರ ಬಂಗಾರದ ನಾಣ್ಯಗಳನ್ನು ಕೊಡಲಾಗುತ್ತದೆ. ಆದರೆ ವಿಗ್ರಹವು ರಾಜನ ತೃಪ್ತಿಗೆ ಸರಿಯಾಗಿಲ್ಲದಿದ್ದರೆ ಆ ಶಿಲ್ಪಿಯ ತಲೆಯನ್ನು ಕತ್ತರಿಸಲಾಗುತ್ತದೆ.''
ಯಾರಾಗಿರಬಹುದು ಈ ಅದೃಷ್ಟವಂತ!
2
ಆದರೆ ಕಳಿಂಗ ದೇಶದ ಯಾವ ಶಿಲ್ಪಿಯೂ ಈ ಕೆಲಸಕ್ಕೆ ಮುಂದೆ ಬರಲಿಲ್ಲ.
ವರಗುಣ! ನೀನು ಯಾಕೆ ಪ್ರಯತ್ನಿಸಬಾರದು?
ಸುಮಿತ್ರ ! ನನಗೆ ರಾಜನ ಹಣವೂ ಬೇಡ, ತಲೆ ಕತ್ತರಿಸಿಕೊಳ್ಳುವ ಆಪತ್ತೂ ಬೇಡ.
3
ಬಹಳ ದಿನಗಳ ನಂತರ ಒಬ್ಬ ಶಿಲ್ಪಿ ರಾಜನ ಬಳಿಗೆ ಬಂದ.
'ಮಹಾರಾಜ ವಿಗ್ರಹವನ್ನು ಕೆತ್ತಲು ನಾನು ಸಿದ್ಧ. ಆದರೆ ಒಂದು ನಿಬಂಧನೆ.
ಏನದು?


ತಾವು ಒಂದು ನಿಬಂಧನೆಯನ್ನು ಹಾಕಿರುವುದರಿಂದ ನಾನೂ ಒಂದು ನಿಬಂಧನೆಯನ್ನು ಹಾಕುತ್ತೇನೆ. ನಾನು 30 ದಿನಗಳಲ್ಲಿ ವಿಗ್ರಹವನ್ನು ತಯಾರು ಮಾಡುತ್ತೇನೆ. ಆದರೆ ಆ 30 ದಿನಗಳಲ್ಲಿ ದೇವಸ್ಥಾನದ ಬಾಗಿಲು ಮುಚ್ಚಲ್ಪಟ್ಟಿರುತ್ತದೆ. ಒಳಗೆ ನಾನು ಕೆಲಸ ಮಾಡುತ್ತಿರುವಾಗ ತಾವಾಗಲಿ ಅಥವಾ ಬೇರೆಯವರು ಯಾರಾದರೂ ಆಗಿರಲಿ ಯಾವ ಕಾರಣದಿಂದಲೂ ಕದವನ್ನು ತೆಗೆದು ಒಳಗೆ ಬರಬಾರದು.
4
ಆಶ್ಚರ್ಯಕರವಾದ ನಿಬಂಧನೆ. ಆದರೂ ನಾನು ಒಪ್ಪಿಕೊಳ್ಳುವೆ. ವಿಗ್ರಹವೇನಾದರೂ ನನ್ನ ತೃಪ್ತಿಗೆ ಬರದಿದ್ದಲ್ಲಿ ನಿನ್ನ ತಲೆ ತೆಗೆಯಲ್ಪಡುತ್ತದೆ.
5
6
ಶಿಲ್ಪಿ ಅಂತೆಯೇ ದೇವಸ್ಥಾನದ ಬಾಗಿಲನ್ನು ಮುಚ್ಚಿಕೊಂಡು ಕೆಲಸ ವನ್ನು ಶುರು ಮಾಡಿದ. ಜನರಿಗೆ ಹೊರಗೆ ಉಳಿ ಯಿಂದ ಒಡೆಯುವ ಶಬ್ದ ಕೇಳಿ ಬರುತ್ತಿತ್ತು.
ಢಣ್!
ಭೂಮ್!
ಢಮ್!
ಫಟ್!
ಢಮ್!
ರಾಜನ ಮಂತ್ರಿ ಒಂದು ದಿನ ರಾಜನ ಬಳಿ ಬಂದು ಹೇಳಿದ...
ಮಹಾರಾಜ, ಆ ವಯಸ್ಸಾದ ಶಿಲ್ಪಿ ಒಬ್ಬನೇ ದೇವಸ್ಥಾನದ ಒಳಗಡೆ ಇದ್ದಾನೆ. ಆದರೆ ನಮಗೆ ಹೊರಗಡೆ ಸಾವಿರಾರು ಜನ ಕೆಲಸ ಮಾಡುತ್ತಿರುವಂತೆ ಸದ್ದು ಕೇಳಿ ಬರುತ್ತಿದೆ. ಅವನು ವಿಗ್ರಹವನ್ನು ಕೆತ್ತುತ್ತಿದ್ದಾನೆಯೋ ಅಥವಾ ದೇವಸ್ಥಾನವನ್ನೇ ಒಡೆದು ಹಾಕುತ್ತಿದ್ದಾನೆಯೋ ನಮಗೆ ಅನುಮಾನ ಬರುತ್ತಿದೆ.
7
ಈಗ ನಾನೇನು ಮಾಡಲಿ? ಒಂದು ತಿಂಗಳು ಒಳಗೆ ಬರುವುದಿಲ್ಲವೆಂದು ಮಾತು ಕೊಟ್ಟಿದ್ದೇನೆ. ಈಗ ಕೇವಲ ಹತ್ತು ದಿನಗಳು ಮಾತ್ರ ಆಗಿವೆ.
8



ಮತ್ತೆ ಹತ್ತು ದಿನಗಳು ಕಳೆದವು. ದೇವಸ್ಥಾನದೊಳಗಿಂದ ತಲೆ ಚಿಟ್ಟು ಹಿಡಿಸುವಂತಹ ನಾನಾ ರೂಪದ ಶಬ್ದಗಳು ಕೇಳಿಬರುತ್ತಿದ್ದವು. ಇದು ಎಲ್ಲರ ಮನದಲ್ಲಿ ಭಯ ಉಂಟುಮಾಡಲು ಶುರು ಮಾಡಿತು.
9
ಮಹಾರಾಜ! ಆ ಮುದುಕ ವಿಗ್ರಹ ಮಾಡುತ್ತಾನೆಂಬುದು ನಮಗೆಲ್ಲಾ ಬಹಳ ಸಂದೇಹ. ಬಹುಶಃ ನಮ್ಮ ಶತ್ರುಗಳಲ್ಲೊಬ್ಬನು ಇಂತಹ ಅದ್ಭುತ ದೇವಾಲಯವನ್ನು ಒಡೆದು ಕೆಡವಲು ಮುದುಕನ ವೇಷದಲ್ಲಿ ಬಂದಿದ್ದಾನೆಂಬುದು ನಮ್ಮ ಸಂದೇಹ.
ಸ್ವಲ್ಪ ತಾಳು, ಒಂದು ತಿಂಗಳಾದ ತಕ್ಷಣ ನಾವು ಒಳಗೆ ಹೋಗಿ ನೋಡೋಣ.
ಅಂದು ರಾತ್ರಿ ರಾಜನ ಕಿವಿಗೂ ದೇವಸ್ಥಾನದ ಒಳಗಿನಿಂದ ಬರುವ ಭಯಂಕರ ಶಬ್ದ ಕೇಳಿಬರಲಾರಂಭಿಸಿತು.
10
ಏನು? ಇವನು ರಾತ್ರಿಯಲ್ಲೂ ಕೆಲಸ ಮಾಡುತ್ತಾನೆಯೆ ?
11
ಅವನು ತಕ್ಷಣ ಮಂತ್ರಿಗೆ ಕರೆ ಕಳುಹಿಸಿದ.
ಮಂತ್ರಿ, ದೇವಸ್ಥಾನದ ಒಳಗಡೆ ದೀಪ ಉರಿಯುತ್ತದೆಯೇ ಕಂಡುಹಿಡಿ.
ಮಹಾರಾಜ ನಾನು ಆಗಲೇ ಪತ್ತೆ ಹಚ್ಚಿದ್ದೇನೆ. ಅಲ್ಲಿ ಯಾವ ಬೆಳಕೂ ಇಲ್ಲ. ಆದರೆ ಶಬ್ದ ಮಾತ್ರ ಭಯಂಕರವಾಗಿದೆ. ಆದುದರಿಂದ ನಾವು ನಾಳೆ ಬೆಳಿಗ್ಗೆ ಬಾಗಿಲನ್ನು ಒಡೆದು ತೆಗೆದು ಒಳಗೆ ಹೋಗಲೇ ಬೇಕು.
12
ಆದರೆ ಇಂದಿಗೆ ಇಪ್ಪತ್ತು ದಿನಗಳು ಮಾತ್ರ ಕಳೆದಿವೆ. ನನಗೂ ಒಳಗಡೆ ಏನಾಗುತ್ತಿದೆ ಎಂಬ ಭಯವಿದೆ. ನಾಳೆಯ ದಿನ ಬಾಗಿಲನ್ನು ಒಡೆಯೋಣ.



13
ಮಾರನೆಯ ದಿನ ದೇವಸ್ಥಾನದ ಬಾಗಿಲು ಒಡೆಯಲ್ಪಟ್ಟಿತು. ಮಹಾರಾಜ ತನ್ನ ಪರಿವಾರದವರೊಡನೆ ಒಳಗಡೆ ಹೋದನು. ಅವರೆಣಿಸಿದಂತೆ ದೇವಸ್ಥಾನಕ್ಕೆ ಯಾವ ಅಪಾಯವೂ ಆಗಿರಲಿಲ್ಲ. ಆದರೆ ಆ ಮುದಿಶಿಲ್ಪಿ ಒಂದು ಕುರೂಪಿ ವಿಗ್ರಹವನ್ನು ಕೆತ್ತುತ್ತಿದ್ದ.
14
ಮೂರ್ಖ ಶಿಲ್ಪಿ! ಇದೇನು ನೀನು ಹೇಳಿದ ಆ ಸುಂದರ ವಿಗ್ರಹ?
ಮಹಾರಾಜ, ತಾವು ತಮ್ಮ ಮಾತಿಗೆ ತಪ್ಪಿ 21ನೆಯ ದಿವಸವೇ ದೇವಸ್ಥಾನದ ಒಳಗಡೆ ಬಂದಿದ್ದೀರಿ. ಭಗವಾನ್ ಜಗನ್ನಾಥನ ಸುಂದರ ಮೂರ್ತಿಗಾಗಿ ಇನ್ನೂ ಕೆಲವು ದಿನಗಳು ತಮ್ಮಿಂದ ಕಾಯಲಾಗಲಿಲ್ಲವೇ?
15
ಮಹಾರಾಜ ನಾಚಿಕೆಯಿಂದ ತಲೆ ತಗ್ಗಿಸಿದ
ಒಳಗಿನಿಂದ ಬರುತ್ತಿದ್ದ ಭಯಾನಕ ಶಬ್ದಗಳನ್ನು ಕೇಳಿ ನಾವು ಒಳ ಬಂದೆವು.
ಭಗವಂತನು ಎಲ್ಲೆಡೆ ಇದ್ದಾನೆ, ಸುಂದರ ಹಾಗೂ ಕುರೂಪಗಳೆರಡರಲ್ಲೂ. ಇದನ್ನು ತಿಳಿಸುವುದಕ್ಕಾಗಿ ನಿನಗೆ ಇಂತಹ ಕಠಿಣ ಪರೀಕ್ಷೆಯನ್ನು ಮಾಡಿದೆ. ಈ ವಿಗ್ರಹವು ದೇವಸ್ಥಾನದಲ್ಲಿರಲಿ. ಮತ್ತೊಂದು ಸುಂದರ ಮೂರ್ತಿಯೊಂದಿಗೆ ಅವನು ಇಲ್ಲೇ ನೆಲೆಸುತ್ತಾನೆ.
16
ಮರುಕ್ಷಣವೇ ಆ ಶಿಲ್ಪಿ ಭಗವಾನ್ ಜಗನ್ನಾಥನಾಗಿ ಕಾಣಿಸಿಕೊಂಡು ಆ ವಿಗ್ರಹದಲ್ಲೇ ಐಕ್ಯನಾದ.
ಓ ಭಗವಾನ್ ಜಗನ್ನಾಥ, ನನ್ನ ಅಜ್ಞಾನವನ್ನು ಮನ್ನಿಸು. ನನ್ನನ್ನು ಹರಸು.